# ಕರ್ನಾಟಕ ವಿಧಾನಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 24-03-2021 ಪ್ರಶ್ನೆ ಸಂಖ್ಯೆ : 1773 (2041)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)

ಉತ್ತರ ನೀಡಬೇಕಾದ ದಿನಾಂಕ : 24-03-2021

ಉತ್ತರಿಸುವ ಸಚಿವರು: ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಸಚಿವರು

ವಿಷಯ : ಪಶ್ಚಿಮಘಟ್ಟ ಪ್ರದೇಶಗಳಲ್ಲಿ "ಶಾಲಾ-ಸಂಪರ್ಕ ಸೇತು" ಯೋಜನೆ

(ಅ) 2018-19 ಮತ್ತು 2019-20ನೇ ಸಾಲಿನ ಆಯ-ವ್ಯಯದಲ್ಲಿ ಪಶ್ಚಿಮಘಟ್ಟ ಪ್ರದೇಶಗಳಲ್ಲಿ ಸಂಪರ್ಕ ಸೇತುವೆ ಇಲ್ಲದಿರುವ ಪ್ರಯುಕ್ತ ಶಾಲಾ ಮಕ್ಕಳು ಮತ್ತು ಹಳ್ಳಿಗಾಡಿನ ರೈತರಿಗೆ ಅನುಕೂಲ ಮಾಡಲು ರೂಪಿಸಿದ "ಶಾಲಾ-ಸಂಪರ್ಕ ಸೇತು" ಯೋಜನೆ ಯಾವ ಹಂತದಲ್ಲಿದೆ ; (ಯೋಜನೆಯ ಸಂಪೂರ್ಣ ವಿವರ ನೀಡುವುದು)

(ಆ) ರಾಜ್ಯದ "ಶಾಲಾ-ಸಂಪರ್ಕ ಸೇತು" ನಿರ್ಮಾಣದ ಅಗತ್ಯತೆ ಎಷ್ಟು; ಈ ಯೋಜನೆಯಡಿ ಗುರುತಿಸಿ ಕಾರ್ಯಕ್ರಮ ಪಟ್ಟಿ (Programme of Work) ಯಲ್ಲಿ ಅಳವಡಿಸಿರುವ ಕಾರ್ಯಕ್ರಮಗಳೆಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಕಳೆದ ಮೂರು ವರ್ಷಗಳಲ್ಲಿ "ಶಾಲಾ-ಸಂಪರ್ಕ ಸೇತು" ಯೋಜನೆ ಅಡಿಯಲ್ಲಿ ರೂಪಿಸಿದ ಕಾರ್ಯಕ್ರಗಳೆಷ್ಟು ಮತ್ತು ಈ ಕಾರ್ಯಕ್ರಮದಡಿ ಒದಗಿಸಿದ ಅನುದಾನ, ಭೌತಿಕ-ಆರ್ಥಿಕಗುರಿ ಮತ್ತು ಸಾಧನೆ ಎಷ್ಟು ; ಮತ್ತು ಬಾಕಿ ಉಳಿದಿರುವ ಕಾರ್ಯಕ್ರಮಗಳು ಯಾವುವು ; ಗುರುತಿಸಿರುವ ಸೇತುವೆಗಳ ನಿರ್ಮಾಣ ಯಾವ ಅವಧಿಯಲ್ಲಿ ಪೂರ್ಣಗೊಳಿಸಲಾಗುವುದು; (ಜಿಲ್ಲಾವಾರು ಮತ್ತು ವರ್ಷಾವಾರು ಮಾಹಿತಿ ನೀಡುವುದು)

(ಈ) 2021-22ನೇ ಸಾಲಿನಲ್ಲಿ "ಶಾಲಾ ಸಂಪರ್ಕ ಸೇತು" ಯೋಜನೆಗೆ ನೀಡಿರುವ ಅನುದಾನವೆಷ್ಟು ; ಈ ಅನುದಾನ ಅಗತ್ಯವಿರುವ ಸೇತುವೆಗಳ ನಿರ್ಮಾಣಕ್ಕೆ ಸಾಕಾಗುವುದೇ? (ಸಂಪೂರ್ಣ ವಿವರ ನೀಡುವುದು)